## ಕರ್ನಾಟಕ ಅರಣ್ಯ ಇಲಾಖೆ

## ಅರಣ್ಯ ಸಂರಕ್ಷಣಾಧಿಕಾರಿಗಳು, ಕೊಡಗು ವೃತ್ತ ಹಾಗೂ ಆನೆ ಕಾವಾಡಿಗ ನೇರ ನೇಮಕಾತಿ ಆಯ್ಕೆ ಪ್ರಾಧಿಕಾರ,ಮಡಿಕೇರಿ

ಸಂಖ್ಯೆ : ಸಿಬ್ಬಂದಿ/ಆನೆಕಾವಾಡಿಗ/ಸಿಆರ್-32/2022-23 ದಿನಾಂಕ : 29.05.2023

# ಅಧಿಸೂಚನೆ

**ವಿಷಯ:1)** 2022-23ನೇ ಸಾಲಿನಲ್ಲಿ ಕೊಡಗು ಅರಣ್ಯ ವೃತ್ತದಲ್ಲಿ ಖಾಲಿ ಇರುವ ಆನೆ ಕಾವಾಡಿಗ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಕುರಿತು.

**ಉಲ್ಲೇಖ :** ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, (ಅರಣ್ಯಪಡೆ ಮುಖ್ಯಸ್ಥರು) ಬೆಂಗಳೂರು ಇವರ ಕಛೇರಿ ಪತ್ರ ಸಂಖ್ಯೆ : KFD/ HOFF/B9/(RCT)11/2022-23 PNR, dt : 28-02-2023

2) ಉಪ ಅರಣ್ಯ ಸಂರಕ್ಷಣಾಧಿಕಾರಿ, ವನ್ಯಜೀವಿ ವಿಭಾಗ, ಮಡಿಕೇರಿ ಇವರ ಕಛೇರಿ ಪತ್ರ ಸಂಖ್ಯೆ : ಎ1/ಸಿಬ್ಬಂದಿ/ಜಿಎಲ್- /2023-24 ದಿನಾಂಕ : 20.05.2023.

3 ಸರ್ಕಾರಿ ಆದೇಶ ಸಂಖ್ಯೆ : ಸಿಆಸುಇ-97/ಸೇನಾನಿ/2002-03 ಬೆಂಗಳೂರು ದಿನಾಂಕ : 02.11.2002.

*******

ಈ ಕಛೇರಿ ಅಧಿಸೂಚನೆ ಸಂಖ್ಯೆ : **ಸಿಬ್ಬಂದಿ/ಆನೆಕಾವಾಡಿಗ/ಸಿಆರ್-32/2022-23 ದಿನಾಂಕ : 15.03.2023 ರಂದು ಕರ್ನಾಟಕ ಅರಣ್ಯ ಇಲಾಖಾ ಸೇವೆಗಳು (ನೇಮಕಾತಿ) (ತಿದ್ದುಪಡಿ) (ನಿಯಮ) 2008 ರನ್ವಯ ಆನೆ ಕಾವಾಡಿಗ ಹುದ್ದೆಗೆ ನೇರ ನೇಮಕಾತಿಗಾಗಿ ಕೆಳ ಕಾಣಿಸಿದ ಮೀಸಲಾತಿ ವರ್ಗೀಕರಣದಡಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.**

| ಪ್ರವರ್ಗ ನೇರ ಮೀಸಲಾತಿ (Vertical Reservation) | ಸಮತಳ ಮೀಸಲಾತಿ (Horizontal Reservation) | | | | | | |
|---|---|---|---|---|---|---|---|
| | ಇತರೆ | ಮಹಿಳಾ ಅಭ್ಯರ್ಥಿ | ಗ್ರಾಮೀಣ ಅಭ್ಯರ್ಥಿ | ಮಾಜಿ ಸೈನಿಕ | ಕನ್ನಡ ಮಾಧ್ಯಮದಲ್ಲಿ ವ್ಯಾಸಾಂಗ ಮಾಡಿದ ಅಭ್ಯರ್ಥಿ | ನಿಯೋಜನೆಯಿಂದ ನಿರಾಶ್ರಿತಗೊಂಡ ಅಭ್ಯರ್ಥಿ | ಒಟ್ಟು |
| ಪ್ರವರ್ಗ – III (ಬಿ) | 1 | – | – | – | – | – | 1 |
| ಒಟ್ಟು | 1 | – | – | – | – | – | 1 |

## ಮೀಸಲಾತಿ ವರ್ಗೀಕರಣ : ಹುದ್ದೆಗಳು

| ಪ್ರವರ್ಗ ನೇರ ಮೀಸಲಾತಿ (Vertical Reservation) | ಸಮತಳ ಮೀಸಲಾತಿ (Horizontal Reservation) | | | | | | |
|---|---|---|---|---|---|---|---|
| | ಇತರೆ | ಮಹಿಳಾ ಅಭ್ಯರ್ಥಿ | ಗ್ರಾಮೀಣ ಅಭ್ಯರ್ಥಿ | ಮಾಜಿ ಸೈನಿಕ | ಕನ್ನಡ ಮಾಧ್ಯಮದಲ್ಲಿ ವ್ಯಾಸಾಂಗ ಮಾಡಿದ ಅಭ್ಯರ್ಥಿ | ನಿಯೋಜನೆಯಿಂದ ನಿರಾಶ್ರಿತಗೊಂಡ ಅಭ್ಯರ್ಥಿ | ಒಟ್ಟು |
| ಪರಿಶಿಷ್ಟ ಜಾತಿ | 1 | – | – | – | – | – | 1 |
| ಸಾಮಾನ್ಯ ಅರ್ಹತೆ | 1 | 1 | – | – | – | – | 2 |
| ಪರಿಶಿಷ್ಟ ಪಂಗಡ | 1 | – | – | – | – | – | 1 |
| ಒಟ್ಟು | 3 | 1 | – | – | – | – | 4 |

ಅದರಂತೆ ಅರ್ಹ ಅಭ್ಯರ್ಥಿಗಳಿಗೆ ನೇಮಕಾತಿ ಪ್ರಕ್ರಿಯೆಗೆ ಆಯ್ಕೆ ಪ್ರಾಧಿಕಾರ ಸಮಿತಿಯನ್ನು ರಚಿಸಿದ್ದು ಸದ್ರಿ ಸಮಿತಿಯ ನೇತೃತ್ವದಲ್ಲಿ ದಿನಾಂಕ 16.05.2023 ಮತ್ತು 17.05.2023 ರಂದು ಅಭ್ಯರ್ಥಿಗಳಿಗೆ ದೈಹಿಕ ತಾಳ್ವಿಕೆ / ಆನೆ ನಿರ್ವಹಣಾ ಸಾಮಾರ್ಥ್ಯ / ಕನ್ನಡ ಭಾಷಾ ತಿಳುವಳಿಕೆ ಪರೀಕ್ಷೆ ನಡೆಸಲಾಗಿರುತ್ತದೆ.

ಉಲ್ಲೇಖ (2)ರ ಆನೆ ಕಾವಾಡಿಗ ಹುದ್ದೆಯ ಆಯ್ಕೆ ಪ್ರಾಧಿಕಾರ ರಚಿಸಿರುವ ಸಮಿತಿಯ ವರದಿಯಂತೆ ಒಟ್ಟು **32** ಅಭ್ಯರ್ಥಿಗಳು ಹಾಜರಾಗಿದ್ದು, **54** ಅಭ್ಯರ್ಥಿಗಳು ಗೈರು ಹಾಜರಾಗಿರುತ್ತಾರೆ. ಸದರಿ 32 ಆನೆ ಕಾವಾಡಿಗಳ ಅಭ್ಯರ್ಥಿಗಳಲ್ಲಿ ಆನೆ ನಿರ್ವಹಣೆ, ದೈಹಿಕ ಸಾಮಾರ್ಥ್ಯ ಪರಿಶೀಲನೆ ಹಾಗೂ ಮೂಲ ದಾಖಲೆಗಳ ಪರಿಶೀಲನೆಗನುಗುಣವಾಗಿ (ಕರ್ನಾಟಕ ರಾಜ್ಯ ವ್ಯಾಪ್ತಿಯ ಅಧಿಸೂಚಿತ ಅರಣ್ಯದೊಳಗೆ ವಾಸವಾಗಿರುವ ಬಗ್ಗೆ ಮತ್ತು ಆನೆ ನಿರ್ವಹಣೆಯ ಅನುಭವದ ಬಗ್ಗೆ) ಆಯ್ಕೆ ಸಮಿತಿಯು ನೀಡಿದ್ದ ಗರಿಷ್ಟ ಅಂಕಗಳ ಅನುಸಾರ ಈ ಕೆಳಕಾಣಿಸಿದ ಅಭ್ಯರ್ಥಿಗಳನ್ನು ಆಯ್ಕೆ ಸಮಿತಿಯ ವರದಿಯನ್ನಾಧರಿಸಿಕೊಂಡು ಅಂತಿಮವಾಗಿ ಈ **ಕೆಳಗಿನ 04 ಅಭ್ಯರ್ಥಿಗಳನ್ನು** ಅರ್ಹ ಅಭ್ಯರ್ಥಿಗಳೆಂದು ಪರಿಗಣಿಸಲಾಗಿದೆ.

## ಆನೆ ಕಾವಾಡಿಗ ಹುದ್ದೆಗೆ ಆಯ್ಕೆಯಾದ ಅಭ್ಯರ್ಥಿಗಳ ತಾತ್ಕಾಲಿಕ ಪಟ್ಟಿ

| ಕ್ರ. ಸಂ. | ಹೆಸರು ಶ್ರೀ / ಶ್ರೀಮತಿ | ಪ್ರವರ್ಗ | ಕರ್ನಾಟಕ ರಾಜ್ಯ ವ್ಯಾಪ್ತಿಯ ಅಧಿಸೂಚಿತ ಅರಣ್ಯದೊಳಗೆ ವಾಸವಾಗಿರುವ ಬಗ್ಗೆ | ಆನೆ ನಿರ್ವಹಣೆಯ ಅನುಭವದ ಬಗ್ಗೆ | ಜನ್ಮ ದಿನಾಂಕ | ಗಂಡು / ಹೆಣ್ಣು | ಒಟ್ಟು ಅಂಕ 100 | ಷರಾ |
|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 |
| 1 | ಬಿ.ಪಿ.ರವಿ | ಪ.ಜಾ. | √ | √ | 01.07.1983 | ಗಂಡು | 82 | |
| 2 | ರಾಜಣ್ಣ ಜೆ.ಎಸ್. | ಪ.ಪಂ. | √ | √ | 02.08.1987 | ಗಂಡು | 100 | |
| 3 | ಮಹಮ್ಮದ್ ಗೌಸ್ | ಪ್ರವರ್ಗ 2ಬಿ | √ | √ | 06.11.1995 | ಗಂಡು | 100 | |
| 4 | ಜೆ.ಎ.ರಂಜನ್ | ಪ.ಪಂ. | √ | √ | 06.04.2001 | ಗಂಡು | 100 | |
| 5 | -- | ಪ್ರವರ್ಗ 3ಬಿ | **ಬ್ಯಾಕ್‌ಲಾಗ್ ಹುದ್ದೆಯಾಗಿ ಉಳಿಸಿಕೊಳ್ಳಲಾಗಿದೆ.** | | | | | |

ಮುಂದುವರೆದು ಸಮಿತಿಯ ವರದಿಯಂತೆ ಪ್ರವರ್ಗ-3ಬಿ ಮೀಸಲಾತಿಯು ಬ್ಯಾಕ್‌ಲಾಗ್ ಹುದ್ದೆಯಾಗಿದ್ದರಿಂದ ಸದ್ರಿ ಬ್ಯಾಕ್‌ಲಾಗ್ ಹುದ್ದೆಗೆ ಅರ್ಹ ಅಭ್ಯರ್ಥಿಗಳು ದೊರೆಯದೆ ಇರುವುದರಿಂದ (ಆನೆ ಕಾವಾಡಿಗ ನೇರ ನೇಮಕಾತಿಯಲ್ಲಿನ ಷರತ್ತಿನ ಅನ್ವಯ) ಈ ಹುದ್ದೆಯನ್ನು **ಬ್ಯಾಕ್‌ಲಾಗ್** ಹುದ್ದೆಯಾಗಿ ಮುಂದುವರೆಸುವಂತೆ ಪರಿಗಣಿಸಲಾಗಿದ್ದು ಹಾಗೂ ಸಾಮಾನ್ಯ ಅರ್ಹತೆಯಲ್ಲಿ ಮಹಿಳಾ ಅಭ್ಯರ್ಥಿಗೆ 01 ಮೀಸಲಾತಿ ವರ್ಗೀಕರಣ ಮಾಡಿದ್ದು, ಸದರಿ ಕೋಟಾದಲ್ಲಿ ಮಹಿಳಾ ಅಭ್ಯರ್ಥಿಗಳು ಆನೆ ಕಾವಾಡಿ ಹುದ್ದೆಯ ನೇರ ನೇಮಕಾತಿಯ ಸಂದರ್ಶನಕ್ಕೆ ಹಾಜರಾಗದೆ ಇರುವುದರಿಂದ ಉಲ್ಲೇಖ (3)ರ ಸರ್ಕಾರಿ ಆದೇಶದ ಕ್ರ.ಸಂ. 7 ರಲ್ಲಿ ವಿವರಿಸಿರುವಂತೆ ಮಹಿಳೆಯರಿಗೆ ಮೀಸಲಿರಿಸಿದ ರಿಕ್ತ ಸ್ಥಾನಗಳಿಗೆ ಅರ್ಹ ಮಹಿಳಾ ಅಭ್ಯರ್ಥಿಗಳು ಲಭ್ಯ ವಾಗದಿದ್ದಲ್ಲಿ ಅಂತಹ ರಿಕ್ತಸ್ಥಾನಗಳನ್ನು ಆಯಾ ವರ್ಗಕ್ಕೆ ಸೇರಿದ ಪುರುಷ ಅಭ್ಯರ್ಥಿಗಳಿಂದ ಭರ್ತಿ ಮಾಡತಕ್ಕದ್ದು ಎಂದು ಉಲ್ಲೇಖಿಸಿರುವುದರಿಂದ ಮಹಿಳಾ ಕೋಟಾದ ಸಾಮಾನ್ಯ ಅರ್ಹತೆಯ ಹುದ್ದೆಯನ್ನು ಸಾಮಾನ್ಯ ಅರ್ಹತೆಯಲ್ಲಿ ಪುರುಷ ಅಭ್ಯರ್ಥಿಯನ್ನು ಪರಿಗಣಿಸಲಾಗಿರುತ್ತದೆ.

ಈ ಮೇಲಿನ ಆನೆ ಕಾವಾಡಿಗ ಹುದ್ದೆಗೆ ತಾತ್ಕಾಲಿಕವಾಗಿ ಆಯ್ಕೆಗೊಂಡ ಅಭ್ಯರ್ಥಿಗಳ ಪಟ್ಟಿಯಲ್ಲಿ ಒಳಗೊಂಡಿರುವ ಎಲ್ಲಾ ಅಭ್ಯರ್ಥಿಗಳ ಪೈಕಿ ಯಾವುದೇ ಅಭ್ಯರ್ಥಿಗಳು ಬಾಧಿತರಾಗಿದ್ದಲ್ಲಿ ಆಕ್ಷೇಪಣೆಗಳನ್ನು **ದಿನಾಂಕ 31.05.2023 ರ ಸಂಜೆ 5.30 ಗಂಟೆಯ ಒಳಗಾಗಿ ಅರಣ್ಯ ಸಂರಕ್ಷಣಾಧಿಕಾರಿ, ಕೊಡಗು ವೃತ್ತ, ಮಡಿಕೇರಿ** ಇವರ ವಿಳಾಸಕ್ಕೆ ಖುದ್ದಾಗಿ ಅಥವಾ ಇ-ಮೇಲ್ ಮುಖಾಂತರ **[ccfkodagu@gmail.com]** ಅಹವಾಲನ್ನು ಸಲ್ಲಿಸತಕ್ಕದ್ದು.

ಅರಣ್ಯ ಸಂರಕ್ಷಣಾಧಿಕಾರಿ
ಹಾಗೂ ಆನೆ ಕಾವಾಡಿ ಹುದ್ದೆಯ ನೇರ
ನೇಮಕಾತಿ ಆಯ್ಕೆ ಪ್ರಾಧಿಕಾರ.
ಕೊಡಗು ವೃತ್ತ, ಮಡಿಕೇರಿ

**ಪ್ರತಿಯನ್ನು :**

1. ಗೌರವಗಳೊಂದಿಗೆ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯಪಡೆ ಮುಖ್ಯಸ್ಥರು) ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2. ಗೌರವಗಳೊಂದಿಗೆ ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಸಿಬ್ಬಂದಿ ಮತ್ತು ನೇಮಕಾತಿ) ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
3. ಶುಭಾಷಯಗಳೊಂದಿಗೆ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಮಾಹಿತಿ ಮತ್ತು ಸಂಪರ್ಕ) ಅರಣ್ಯ ಭವನ, ಬೆಂಗಳೂರು ಇವರಿಗೆ ಕಳುಹಿಸುತ್ತಾ ಈ ಮಾಹಿತಿಯನ್ನು ಅರಣ್ಯ ಇಲಾಖೆಯ ವೆಬ್‌ಸೈಟ್‌ನಲ್ಲಿ ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಕಟಿಸಬೇಕಾಗಿ ಕೋರಲಾಗಿದೆ.